**30101 / 40101**

**ಮೊದಲನೆಯ ಚತುರ್ಮಾಸ ಬಿ.ಕಾಂ./ಬಿ.ಬಿ.ಎ ಪರೀಕ್ಷೆಗಳು – ಮಾರ್ಚ್/ ಏಪ್ರಿಲ್ 2022**

**ಸ್ಕೀಮ್: ಸಿಬಿಸಿಎಸ್**

**ಕನ್ನಡಭಾಷೆ**

**ವಾಣಿಜ್ಯ ಸೌರಭ – ೧**

028

**ಸಮಯ: 3 ಗಂಟೆ** **ಗರಿಷ್ಠ ಅಂಕ: 80**

**ಕಾವ್ಯ ಭಾಗ (50 ಅಂಕಗಳು)**

**1. ಅ. ಒಂದು ಪದ್ಯ ಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ.** **1x5=5**

೧. ಕರೆದಾಗ ತೌರುಮನೆ, ನೆನೆದಾಗ ನನ್ನ ಮನೆ –
ಹಳ್ಳಿಯೆರಡರ ಮುದ್ದು ಬಳ್ಳಿಯವಳು,
ಮುಚ್ಚುಮರೆಯಿಲ್ಲದೆಯೆ ಅಚ್ಚಮಲ್ಲಿಗೆಯಂತೆ
ಅರಳುತಿಹುದವಳ ಬದುಕು
ಬಂಗಾರದೊಡವೆಗಳ ಬಯಸಿಲ್ಲ ಮನಸಿನಲಿ
ಬಂಗಾರದಂಥ ಹುಡುಗಿ

೨. ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿಸಾಕ್ಷಿ;
ಗೆಲವಿದ್ದರದಕೆ ನಿಮಗಿಹುದು ಶಕ್ತಿ.
ನುಡಿ ಮಡಿದರೆಲ್ಲರೂ ಮೂಕ ಜಂತುಗಳಂತೆ;
ಬಾಲವಲ್ಲಾಡಿಪುದೆ ಪರಮಭಕ್ತಿ
ಉತ್ತರದ ಕಾಶಿಯಲಿ ಕತ್ತೆ ಮಿಂದೈತರಲು
ದಕ್ಷಿಣದ ದೇಶಕದು ಕುದುರೆಯಹುದೆ?

**ಆ. ಒಂದು ವಾಕ್ಯದಲ್ಲಿ ಉತ್ತರಿಸಿ.** **5x1=5**

೧. 'ರಾಧೇಯ' ಎಂದು ಯಾರನ್ನು ಕರೆಯಲಾಗಿದೆ?
೨. 'ಬಡವನಳಿಲು ಸೇವೆಯೆಂದು ಧನ್ಯ'ನಾದ ಕವಿ ಯಾರು?
೩. 'ನನ್ನ ಮನವ ನನಗೆ ಕೊಡು' ಎಂದು ಕವಿ ಯಾರನ್ನು ಕೇಳುತ್ತಿದ್ದಾರೆ?
೪. 'ಕುರುಕುಲ ಜೀವಾಕರ್ಷಣ ಪರಿಣತ'ಎಂದು ಕರೆಸಿಕೊಂಡ ಜಡೆ ಯಾರದು?
೫. ಮಾರಮ್ಮನ ಮುಡಿಗೆ ಯಾವ ಹೂವನ್ನು ಆಯುತ್ತಾರೆ?

**2. ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ** **4x2½=10**

೧. ತಾಯೆಂದವಳು ತಾಯಾಗದವಳು.
೨. ಅರಿಯದು ಅಳವು ತಿಳಿಯದು ಮನವು.
೩. ಇಳೆಯ ಬವಣೆಗೆ ಜಡ್ಡುಬಿದ್ದನೆ?
೪. ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದೆ.
೫. ಶಾನುಭೋಗ ಗೀಚಿದ್ದಕ್ಕೆ ಹೆಬ್ಬೆಟ್ಟನು ಒತ್ತುವವರು.
೬. ಒಲುಮೆಯೊಳಗೊಂದು ನಾವು; ನಮಗಿಲ್ಲ ನೋವು, ಸಾವು.

ಪು.ತಿ.ನೋ

**3.** ಅ **ಎರಡುವಿಷಯಗಳಿಗೆ ಸ್ವಂತ ಅಭಿಪ್ರಾಯವನ್ನು ಬರೆಯಿರಿ.** **2x4=8**

೧. ಪರಭಾಷಾ ವ್ಯಾಮೋಹ ಮತ್ತು ಸ್ವಭಾಷಾ ಅಭಿಮಾನದ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.

೨. ಶುದ್ಧಭಕ್ತಿ ಮತ್ತು ಆಡಂಬರದ ಭಕ್ತಿಯ ಬಗ್ಗೆ ನಿಮ್ಮ ನಿಲುವೇನು? ಬರೆಯಿರಿ.

೩. ವ್ಯಕ್ತಿಸ್ವಾತಂತ್ರ್ಯವನ್ನು ಸಮಾಜ ಹತ್ತಿಕ್ಕುವುದು ಎಷ್ಟು ಸರಿ? ವಿವರಿಸಿ.

೪. ವಯಸ್ಸಾದ ಹೆತ್ತವರನ್ನು ಮಕ್ಕಳು ಕಡೆಗಣಿಸುವುದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ಆ **ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** **4x½=2**

ಸಂಕೋಲೆ, ಫಣಿ, ಕೆಳೆಯ, ಸೌಸವ, ನಖ, ಕಾನನ, ದುಗುಡ, ಕರಾಮತ್ತು

**4. ಒಂದುಪ್ರಶ್ನೆಗೆ ಉತ್ತರಿಸಿ:** **1x10=10**

೧. ಸೂರ್ಯೋದಯ ಕಾಲದ ಅನುಪಮ ಸೌಂದರ್ಯ 'ಬೆಳಗು' ಕವಿತೆಯಲ್ಲಿ ಮೂಡಿಬಂದಿರುವ ಬಗೆಯನ್ನು ವಿವರಿಸಿ.

೨. 'ಸಾಯುತ್ತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ! ಕವಿತೆಯಲ್ಲಿ ವ್ಯಕ್ತಗೊಂಡಿರುವ ಕನ್ನಡಾಭಿಮಾನವನ್ನು ಕುರಿತು ಬರೆಯಿರಿ.

**5. ಎರಡು ಪ್ರಶ್ನೆಗಳಿಗೆ ಉತ್ತರಿಸಿ:** **2x5=10**

೧. ಕುಂತಿಯ ಅಂತರಂಗದ ತೊಳಲಾಟವನ್ನು ಕವಯಿತ್ರಿ ಹೇಗೆ ನಿರೂಪಿಸಿದ್ದಾರೆ? ತಿಳಿಸಿ.

೨. ಜಡೆಯ ಬಹುರೂಪಗಳು 'ಜಡೆ' ಕವಿತೆಯಲ್ಲಿ ಮೂಡಿಬಂದಿರುವ ಬಗೆಯನ್ನು ವಿವರಿಸಿ.

೩. 'ಶ್ರೀ' ಅವರ ಕನ್ನಡ ಪ್ರೇಮದ ವಿಶೇಷತೆಯನ್ನು ಪರಿಚಯಿಸಿ.

೪. ಕವಿಗೆ ದೇವರಮೂರ್ತಿಗಿಂತ ಗರುಡಗಂಭ ಇಷ್ಟವಾಗುವುದೇಕೆ? ವಿಶದಪಡಿಸಿ.

MFGC LIBRARY

**ಕಥನ ಭಾಗ (30 ಅಂಕಗಳು)**

**6. ಒಂದು ಪ್ರಶ್ನೆಗೆ ಉತ್ತರಿಸಿ:** **1x10=10**

೧. ಕಲ್ಮಾಡಿಯಲ್ಲಿ ಊರಮ್ಮನ ಜೊತೆಗೆ 'ಕಾಡಮ್ಮ' ಸೃಷ್ಟಿಯಾದ ಹಿನ್ನಲೆಯನ್ನು ಕುರಿತು ಬರೆಯಿರಿ.

೨. ಬಡವರ ಅಸಹಾಯಕತೆಯ ದುರ್ಲಾಭ ಪಡೆಯುವ ವ್ಯವಸ್ಥೆಯ ಕ್ರೂರಮುಖ 'ತೊಟ್ಟಿಲುತೂಗಿತು' ಕಥೆಯಲ್ಲಿ ತೆರೆದುಕೊಂಡಿರುವ ಬಗೆಯನ್ನು ವಿವರಿಸಿ.

**7. ಒಂದು ಪ್ರಶ್ನೆಗೆ ಉತ್ತರಿಸಿ:** **1x10=10**

೧. 'ಸಾಂದರ್ಭಿಕ ಒತ್ತಡಗಳಿಗೆ ಇಂದು ತಾನೂ ಬಲಿಯಾಗಲಿಲ್ಲ, ವಾಣಿಯ ಬದುಕನ್ನೂ ಹಾಳುಮಾಡಲಿಲ್ಲ' – ಈ ಹೇಳಿಕೆಯನ್ನು ವಿಶದಪಡಿಸಿ.

೨. ಬಡತನದ ನಡುವೆಯೂ ಸಾಂತವ್ವ ಬದುಕನ್ನು ಭದ್ರವಾಗಿ ಕಟ್ಟಿಕೊಂಡ ಬಗೆಯನ್ನು ವಿವರಿಸಿ.

**8. ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:** **2x5=10**

೧. ರಖುಮಾ ಮತ್ತು ಜಾತ್ರ್ಯಾನ ಸಾಂಸಾರಿಕ ಬದುಕನ್ನು ಕುರಿತು ಬರೆಯಿರಿ.

೨. 'ವಾಣಿಯ ಸಮಸ್ಯೆ' ಕಥೆಯ ರತ್ನನ ಪಾತ್ರವನ್ನು ಪರಿಚಯಿಸಿ.

೩. ಸಾಂತವ್ವ ಅನಾರೋಗ್ಯ ಪೀಡಿತಳಾಗಲು ಕಾರಣವಾದ ಹಿನ್ನೆಲೆಯನ್ನು ತಿಳಿಸಿ.

೪. ತನ್ನ ಕೋಣವನ್ನು ಕೊಲ್ಲುವ ಸಂದರ್ಭದಲ್ಲಿ ಮುನಿಯನ ಅಂತರಂಗದ ತೊಳಲಾಟ ಹೇಗಿತ್ತು? ವಿವರಿಸಿ.

** *** **